ಸಮಗ್ರ ಶಿಕ್ಷಣ ಕಾನೂನಿಗೆ ತಿದ್ದುಪಡಿ

579 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದಲ್ಲಿ ಸಮಗ್ರ ಶಿಕ್ಷಣ ಕಾನೂನನ್ನು ಯಾವಾಗ ಜಾರಿಗೆ ತರಲಾಯಿತು?*

ಆ) *ಈ ಮಸೂದೆಯನ್ನು ಅನುಷ್ಠಾನಕ್ಕಾಗಿ ನಿಯಮಗಳನ್ನು ರಚಿಸಲಾಗಿದೆಯೇ?*

ಇ) *ಹಾಗಿಲ್ಲದಿದ್ದಲ್ಲಿ ಯಾವಾಗ ರಚಿಸಲಾಗುವುದು?*

ಈ) *ಈ ಕಾನೂನಿನ ವ್ಯಾಪ್ತಿಯಲ್ಲಿ ಇನ್ನೂ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಕೈಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಉ) *ಈ ಕಾನೂನಿನಲ್ಲಿರುವ ಹಲವಾರು ಲೋಪ ದೋಷಗಳನ್ನು ಸರಿಪಡಿಸಲು ಸರ್ಕಾರ ಶಿಕ್ಷಣತಜ್ಞರ ಸಮಿತಿಯನ್ನು ರಚಿಸಲು ಸರ್ಕಾರದವರು ಪರಿಶೀಲಿಸುವರೇ?*

ಶ್ರೀ ಹೆಚ್.ಜಿ. ಗೋವಿಂದೇ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 1-3-95 ರಿಂದ ಜಾರಿಗೆ ಬಂದಿದೆ.

ಆ) ರಚಿಸಲಾಗುತ್ತಿದೆ.

ಇ) ಆದಷ್ಟು ಬೇಗನೆ ರಚಿಸಲಾಗುವುದು

ಈ) ಇಲ್ಲ

ಉ) ಇಲ್ಲ

ಬೆಂಗಳೂರಿನಲ್ಲಿ ರಾಷ್ಟ್ರೀಯ ಕ್ರೀಡೆಗಳು

582 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೆಂಗಳೂರಿನಲ್ಲಿ 1996ರಲ್ಲಿ ನಡೆಯಲಿರುವ ರಾಷ್ಟ್ರೀಯ ಕ್ರೀಡೆಗಳಿಗಾಗಿ ಕೈಗೊಂಡಿರುವ ಕ್ರೀಡಾಂಗಣಗಳ ಬಗ್ಗೆ ಪೂರ್ತಿ ವಿವರ ನೀಡುವುದು.*

ಆ) *ಹೊಂಬೇಗೌಡನಗರದ ಕ್ರೀಡಾಂಗಣಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ.*

ಇ) *ಇಲ್ಲಿಯವರೆಗೆ ಈ ಕ್ರೀಡಾಂಗಣ ನಿರ್ಮಾಣಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು?*

ಈ) *ಈ ಕ್ರೀಡಾಂಗಣಗಳು ರಾಷ್ಟ್ರೀಯ ಕ್ರೀಡೆಗಳು ಪ್ರಾರಂಭವಾಗುವುದಕ್ಕೆ ಮುಂಚೆ ಪೂರ್ಣಗೊಳ್ಳುವುದೇ?*

ಉ) *ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ ಕ್ರೀಡಾಂಗಣ ನಿರ್ಮಾಣಕ್ಕಾಗಿ ಬಂದಿರುವ ಹಣವೆಷ್ಟು?*

ಊ) *ಕ್ರೀಡಾಂಗಣಕ್ಕಾಗಿ ಹಣ ನೀಡುವವರಿಗೆ ಆದಾಯ ತೆರಿಗೆಯಿಂದ ವಿನಾಯಿತ ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ?*

ಶ್ರೀ ಅಜಯಕುಮಾರ್ ಸರ್ ನಾಯಕ್ (ಯುವಜನ ಸೇವೆ ಮತ್ತು ಕ್ರೀಡಾ ಸಚಿವರು) :

ಅ) ರಾಷ್ಟ್ರೀಯ ಕ್ರೀಡೆಗಳಿಗಾಗಿ ಬೆಂಗಳೂರು ನಗರದಲ್ಲಿ ಕೆಳಕಾಣಿಸಿದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಅವುಗಳೆಂದರೆ -